ಕರೆಯುತ್ತೇನೆ. ಯಾವ್ಯಾವ ರೀತಿ ಈ ಒಂದು ಬರಗಾಲ, ಪ್ರವಾಹದ ವಿಷಯದಲ್ಲಿ ಕೆಲವು ಕಾರ್ಯಕ್ರಮಗಳನ್ನು ಕೈಗೊಂಡು ಹಣವನ್ನು ಖರ್ಚು ಮಾಡಬೇಕಾಗುತ್ತದೆ, ನಾನು ಈ ಬಗ್ಗೆ ಅವರ ಸಲಹೆಗಳನ್ನು ತೆಗೆದುಕೊಂಡು ಸದಸ್ಯರ ಏನೊಂದು ಒಂದು ಭಾವನೆಯನ್ನು ಗುರುತಿಸಿದ್ದೇನೆ. ಅದರ ಬಗ್ಗೆ ಸದ್ಯದಲ್ಲೇ ಒಂದು ಸಭೆಯನ್ನು ಕರೆದು ತೀರ್ಮಾನ ಮಾಡುತ್ತೇನೆ. ಬೆಂಗಳೂರು ನಗರದ ಹಲವಾರು ವಿಷಯಗಳಿವೆ, ನಾನು ಒಂದೊಂದರ ಬಗ್ಗೆಯೂ ಹೇಳಲಿಕ್ಕಾಗುವುದಿಲ್ಲ. ರಾಯಚೂರಿನ ಕೃಷಿ ವಿಶ್ವವಿದ್ಯಾಲಯದ ಬಗ್ಗೆ ಬೋಸರಾಜುರವರು ಹೇಳಿದ್ದಾರೆ. ಅದೇ ರೀತಿ ನಮ್ಮ ಗುರುಪಾದಪ್ಪನವರು ಹೇಳಿದರು. ಬಿ.ಆರ್. ಪಾಟೀಲ್‌ರವರು ಸುವರ್ಣಗ್ರಾಮದ ವಿಷಯವನ್ನೇನು ಪ್ರಸ್ತಾಪ ಮಾಡಿದ್ದಾರೆ, ಎಲ್ಲಾ ವಿಷಯಗಳನ್ನು ನಾನು ಸಂಪೂರ್ಣವಾಗಿ ಜಿಲ್ಲಾವಾರು ಹೇಳಲಿಕ್ಕೆ ಹೋಗಲಿಲ್ಲ. ಅದಕ್ಕೆ ಕಾರಣ ಮತ್ತೆ ಒಂದೂವರೆ ಗಂಟೆ extra ಬೇಕಾಗುತ್ತದೆ, ಹಾಗೆ ಹೆಚ್ಚಿನ ಸಮಯ ತೆಗೆದುಕೊಳ್ಳುವುದು ಬೇಡವೆಂದು ಸ್ಥಿಮಿತಗೊಳಿಸಿದ್ದೇನೆ. ಎಲ್ಲಾ ಜಿಲ್ಲೆಗಳ ಬಗ್ಗೆ ನಾನು ಪ್ರತ್ಯೇಕವಾಗಿ ಗಮನಹರಿಸುತ್ತೇನೆ. ಈಗಾಗಲೇ ಸರ್ಕಾರ ಕೆಲವು ವಿಷಯಗಳಲ್ಲಿ ತೀರ್ಮಾನ ಮಾಡಿದೆ. ಸಭೆಯನ್ನು ಕರೆದು ಎಲ್ಲಾ ವರದಿಗಳನ್ನು ನಮ್ಮ ಸದಸ್ಯರ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : ಮಾನ್ಯಮಂತ್ರಿಗಳು explain ಮಾಡಿ

13. ಶಾಸನ ರಚನೆ

(4) ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ 2005

ಡಾ: ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಅಧಿನಿಯಮ 1961ನೇ ಕಾನೂನಿಗೆ ಕಳೆದ ವರ್ಷ ನಾವೊಂದು ತಿದ್ದುಪಡಿಯನ್ನು ತಂದಿದ್ದೆವು. ಅದರಲ್ಲಿ ಸರಕಾರ ಇದ್ದ ರಸ್ತೆಯನ್ನು ಅಗಲ ಮಾಡುವುದು, ಅಥವಾ ಹೊಸ ರಸ್ತೆಯನ್ನು ಮಾಡುವಂತಹ ಸಂದರ್ಭ, ಅಥವಾ ಬೇರೆ ಪಾರ್ಕು ಇತ್ಯಾದಿಗಳನ್ನು, ಮಾಡುವಾಗ ಮತ್ತು ಮೂರನೇಯದಾಗಿ ಈ ಹಳೆಯ ಪಾರಂಪರಿಕ ಕಟ್ಟಡಗಳನ್ನು ಉಳಿಸುವುದಕ್ಕೋಸ್ಕರ ಯಾರಾದರೂ ಸ್ಥಳವನ್ನು ಉಚಿತವಾಗಿ ಕೊಟ್ಟಲ್ಲಿ, ಅವರು ಉಚಿತವಾಗಿ ಕೊಟ್ಟಿಂತಹ ಸ್ಥಳದ ಒಂದೂವರೆಯಷ್ಟು ಅವರಿಗೆ ಅದನ್ನು ಅಭಿವೃದ್ಧೀಪಡಿಸುವಂಥ ಹಕ್ಕನ್ನು ಕೊಟ್ಟಿದ್ದೇವೆ. ಈಗ ಮೂರು ಕಲಮಿನ ಒಟ್ಟಿಗೆ ಆಗ ಯೋಚನೆ ಮಾಡದಿರುವಂತಹ ಈ ಪೆಟ್ರೋಲ್ ಬಂಕ್‌ಗಳು ಮತ್ತು ಮಾಲ್

clearance ಮಾಡುವಾಗ ಯಾರಾದರೂ ಉಚಿತವಾಗಿ ಜಾಗವನ್ನು ಬಿಟ್ಟುಕೊಟ್ಟರೆ, ಉಚಿತವಾಗಿ ಬಿಟ್ಟುಕೊಡದೇ ಇದ್ದರೆ 1894 ರ ಭೂಸ್ವಾಧೀನ ಕಾನೂನು ಇದೆ. ಉಚಿತವಾಗಿ ಕೊಟ್ಟಲ್ಲಿ ಹತ್ತು sq. feet ಜಾಗವನ್ನು ಕೊಟ್ಟರೆ 15 sq. feetನಲ್ಲಿ ಅವರು development rights ಅನ್ನು ಅವರಿಗೆ ಕೊಡುವಂತಾದ್ದ ನಾವು ಮಾಡಿದ್ದೇವೆ. ಇದರಿಂದ ಯಾರಿಗೂ ಯಾವುದೇ ತೊಂದರೆಯಾಗುವುದಿಲ್ಲ. ಅವರ ಇಚ್ಛೆಯಿಂದ ಬಿಟ್ಟುಕೊಟ್ಟರೆ ಮಾಡುವಂಥಾದ್ದು. ಆ ರೀತಿಯ ಒಂದು ಸೇರ್ಪಡೆಯನ್ನು ಮಾಡಲಿಕ್ಕೆ, ಇದನ್ನು ತಂದಿದ್ದೇವೆ. ದಯವಿಟ್ಟು ಈ ಒಂದು ತಿದ್ದುಪಡಿಯನ್ನು ಪಾಸ್ ಮಾಡಿ ಕೊಡಬೇಕೆಂದು ಕೋರುತ್ತೇನೆ.

ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಎರಡು ಮೂರು ವಿಚಾರಗಳಿವೆ. ನಾನು ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಡೈರೆಕ್ಟ್ ಆಗಿ ತರುತ್ತೇನೆ. ನಮಗೆ ಹೇಳಿದ ವಿಚಾರ, ಮಾನ್ಯ ಆಚಾರ್ ರವರು ಹೇಳಿದಂತೆ ಎಲ್ಲಿ ಅನಧಿಕೃತವಾಗಿ ಕೆಲವು ಪರ್ಸೆಂಟೇಜ್ ಏನು ಹೇಳಿದ್ದಾರೆ, ಅದನ್ನು ದಯಮಾಡಿ ಈಗ ತನ್ನಿ. ಇದರ ಬಗ್ಗೆ ಭಾರೀ ಚರ್ಚೆಯಾಗಬೇಕಾಗಿದೆ. ಇದು ಟಿ.ಡಿ.ಆರ್. ನಲ್ಲಿ ಮಾಡತಕ್ಕಂಥದ್ದು, ಇದು ತಮಗೆ ಲಘುವಾಗಿರಬಹುದು, ಬೆಂಗಳೂರು ನಗರಕ್ಕೆ ಇದು ಭಾರಿ ಪ್ರಮುಖವಾದುದು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ತಮ್ಮ ಮುಖೇನ ವಿನಂತಿ ಮಾಡುತ್ತೇನೆ. ದಯಮಾಡಿ ಇದನ್ನು ಮುಂದಿನ ಸಾರಿ ತೆಗೆದುಕೊಳ್ಳಿ.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸೋಮಣ್ಣನವರು ತಪ್ಪು ತಿಳಿದು ಕೊಂಡಿದ್ದಾರೆ. ಅವರಾಗಿ ಉಚಿತವಾಗಿ ಕೊಟ್ಟರೆ ಮಾತ್ರ ಇದರಲ್ಲಿ ಯಾವ ಒಂದು ಬಾಧಕವೂ ಇಲ್ಲ. ಯಾರನ್ನೂ ಒತ್ತಾಯ ಮಾಡುವುದಿಲ್ಲ.

ಶ್ರೀ ವಿ. ಸೋಮಣ್ಣ : ಸ್ವಾಮಿ, ದಯಮಾಡಿ ಕ್ಷಮಿಸಿ, ನಾನು ಇದರ ಬಗ್ಗೆ ಸ್ಟಡಿ ಮಾಡಿದ್ದೇನೆ. ಇವತ್ತು ಒಂದು ರಸ್ತೆಯನ್ನು ನಾವು ಆಗಲೀಕರಣಗೊಳಿಸಬೇಕಾಗುತ್ತದೆ. ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವತ್ತಿನ ದಿವಸ ಆಂಧ್ರಪ್ರದೇಶದಲ್ಲಿಯೂ ಇದೇ ರೀತಿ ಮಾಡಿ ಅಲ್ಲಿ failure ಆಯಿತು. ಏಕೆಂದರೆ ನಾವು ಹೇಳುವಂತಾದ್ದು ನಾವು ಏನು ಕಟ್ಟಡಗಳನ್ನು, ರಸ್ತೆಗಳನ್ನು ತೆಗೆದುಕೊಳ್ಳುತ್ತೇವೆ, ಉಳಿದಂಥ ಜಾಗದಲ್ಲಿ ಒಂದಕ್ಕೆ 25,35,40 ಪಟ್ಟು ಕಟ್ಟಡಗಳನ್ನು ಕಟ್ಟತಕ್ಕಂತಾದ್ದು, ಬೇರೆ ಬೇರೆ ಕಡೆ ಜಾಗಗಳನ್ನು ಕೊಡತಕ್ಕಂಥಾದ್ದು ಆಗುತ್ತದೆ. ಆದ್ದರಿಂದ ದಯಮಾಡಿ ಇದರಿಂದ ನಾವು ಸಫಲತೆಯನ್ನು ಕಾಣಲಿಕ್ಕಾಗುವುದಿಲ್ಲ. ಆದ್ದರಿಂದ ಆಚಾರ್ ರವರೇ, ದಯಮಾಡಿ ಕಮಿಸಿ.

ಡಾ : ವಿ.ಎಸ್. ಆಚಾರ್ಯ : ಮಾನ್ಯ ಸೋಮಣ್ಣನವರು ತಪ್ಪು ತಿಳಿದುಕೊಂಡಿದ್ದಾರೆ. ನಾನು ಅವರಿಗೆ convince ಮಾಡುತ್ತೇನೆ.

ಶ್ರೀ ಎನ್. ಧರ್ಮಸಿಂಗ್ : ಶ್ರೀ ಸೋಮಣ್ಣನವರು Urban Development Minister. ಆಗಿದ್ದರು, ಬೆಂಗಳೂರು ನಗರದ ಬಿನ್ನಿಪೇಟೆಯ ಶಾಸಕರಾಗಿದ್ದಾರೆ, ಇವತ್ತು ಕೃಷ್ಣಪ್ಪನವರು ಇದ್ದಾರೆ. ನಮಗೇತಕ್ಕೆ ಅನುಮಾನ ಬರುತ್ತಿದೆಯೆಂದರೆ ಇಲ್ಲಿ ಪಕ್ಕದಲ್ಲಿ ಸುಬ್ರಮಣ್ಯನಾಯ್ಡುರವರು ಕುಳಿತಿದ್ದಾರೆ. He is very interested I think. ಇವತ್ತು ಬೆಂಗಳೂರಿನಲ್ಲಿರತಕ್ಕಂಥ ಏನು ಲ್ಯಾಂಡ್ ಪ್ರೈಸ್. ಇದೆ, ಅದು ಬಾಂಬೆಯಲ್ಲಿರತಕ್ಕಂಥ ಲ್ಯಾಂಡ್ ಪ್ರೈಸ್‌ಕ್ಕಿಂತ ದ್ವಿಪ್ಪಟ್ಟು ಇದೆ. ಹಾಗಾಗಿ ಇವತ್ತಿನ ದಿವಸ ಇದಕ್ಕೆ ವಿಚಾರ ಮಾಡೋಣ. ಈಗೇನಾಗಿದೆ, ನಾನು ಕೂಡ ಇದರ ಅಧ್ಯಕ್ಷನಾಗಿದ್ದೇನೆ. ಅಲ್ಲಿ ನಾವು ಬಿಲ್ ಪಾಸ್ ಮಾಡಿ. Governer ಗೆ ಕೂಡ ಕಳುಹಿಸಿದ್ದೇವೆ ಎರಡನೇಯದಾಗಿ ಶ್ರೀನಿವಾಸಮೂರ್ತಿಯವರು ಇಲ್ಲಿರಬೇಕಾಗಿತ್ತು. ಯಾವ ರೀತಿಯಾಗಿ ಇದನ್ನು regularise ಮಾಡಿದ್ದಾರೆಂದು ಪರಿಶೀಲನೆ ಮಾಡಲಿಕ್ಕೆ ಅವರನ್ನು ನಾವು ಬಾಂಬೆಗೆ, ಹೈದರಾಬಾದಿಗೆ, ಮದರಾಸಿಗೆ ಕಳುಹಿಸಿದ್ದೆವು ಯಾವ ರೀತಿಯಾಗಿ regularise ಮಾಡಿದ್ದಾರೆ. ಎಂದು ತಿಳಿಸು ಬರುವುದಕ್ಕೆ It requires wide consultation. ಯಾವರೀತಿಯಾಗಿ ಇದನ್ನು ಮಾಡಿದ್ದಾರೆ ಎಂದು ತಿಳಿದುಕೊಂಡು ಬರುವುದಕ್ಕೆ ಇನ್ನೊಮ್ಮೆ ಶಾಸಕರನ್ನು ಕರೆಸಿ. ಅವರಿಗೆ ವಿಚಾರವನ್ನು ಹೇಳಿ; ಬೆಳಗಾವಿಯಲ್ಲಿ ಅಧಿವೇಶನ ಕರೆದ ಉದ್ದೇಶವೇನೆಂದರೆ, ಮಹಾಜನ್ ಆಯೋಗದ ವರದಿ ಪ್ರಸ್ತಾಪ ಮಾಡುವ ಬಗ್ಗೆ ಅದು ಎರಡನೇಯದಾಗಿ Office of profit Bill ಆಗಿದೆ. ಈಗ ಸಣ್ಣ ಸಣ್ಣ ಬಿಲ್ಲುಗಳನ್ನು ತೆಗೆದುಕೊಂಡು ಬರುತ್ತೀರಿ ಅಲ್ಲದೆ ಮಾನ್ಯ ಮುಖ್ಯಮಂತ್ರಿಗಳೂ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದಂಥ ಎಲ್ಲಾ ಪ್ರಶ್ನೆಗಳಿಗೂ ಸಮಗ್ರವಾದ ಉತ್ತರವನ್ನು ಕೊಟ್ಟಿದ್ದಾರೆ. ಈಗ ನೀವ್ಯಾಕೆ ಬಿಲ್ಲುಗಳನ್ನು ತಂದು ನಮಗೆ ನಿಮಗೆ ಮನಸ್ತಾಪ ಮಾಡುತ್ತೀರಿ? ಏನು ಅಂತಹ urgent ಇದೆ. ಬೆಂಗಳೂರಿಗೆ ಹೋದಾಗ ಇನ್ನೊಮ್ಮೆ ಸಭೆಯನ್ನು ಕರೆಸಿ, ಮಾತನಾಡೋಣ, ಮತ್ತೆ ಕರೆಸಿರಿ.

ಶ್ರೀ ವಿ. ಸೋಮಣ್ಣ : ಒಂದು ನಿಮಿಷ ಸರ್, ದಯಮಾಡಿ ಕ್ಷಮಿಸಿ ಮಾನ್ಯ ಆಚಾರ್ ರವರೇ, ನಾನು ಬೆಂಗಳೂರು ನಗರಕ್ಕೆ ಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ದಯವಿಟ್ಟು ತಾವು ಬೆಂಗಳೂರುನಗರಕ್ಕೆ ಮಾರಕ ಮಾಡಬೇಡಿ. ಮುಖ್ಯಮಂತ್ರಿಗಳ ಬಗ್ಗೆ ಬಹಳ ಗೌರವವಿದೆ ನೀವು ಹೀಗೆ ಮಾಡಿ ಅವರ ಹೆಸರನ್ನು ಕೆಡಿಸಬೇಡಿ. ಈ ಬಿಲ್ ಬೇಡ, ದಯವಿಟ್ಟು ತಾವು Unauthorised

constrctions ಗೆ ಸಂಬಂಧ ಪಟ್ಟಂಥ Bill ತೆಗೆದುಕೊಳ್ಳಿ. ಅದಕ್ಕೆ ನಾವು ಒಪ್ಪಿಗೆ ಕೊಡುತ್ತೇವೆ. ದಯವಿಟ್ಟು ಈ ಬಿಲ್ ಬೇಡ, ಇದರ ಮೇಲೆ ಸಾಕಷ್ಟು ಚರ್ಚೆ ಮಾಡಬೇಕಾಗಿದೆ. High tension line ನಲ್ಲಿರಬೇಕಾದುದು, ಇಷ್ಟು ದೂರದಲ್ಲಿದೆ, ಸಾವಿರಾರು ಮನೆಗಳನ್ನು ಕಟ್ಟಿದ್ದಾರೆ. ಅದನ್ನೆಲ್ಲಾ ಒಡೆದುಹಾಕಲಿಕ್ಕೆ ಆಗುತ್ತದೆಯೇ? 20 ವರ್ಷಗಳಿಂದ ಇದ್ದಾರೆ ಈಗ್ಯಾಕೆ ಅವರಿಗೆ ತೊಂದರೆ ಮಾಡುತ್ತೀರಿ? ದಯಮಾಡಿ ನಾನು ನೋಡುತ್ತಿದ್ದೇನೆ. ದಯವಿಟ್ಟು ಈ ಬಿಲ್ಲನ್ನು ಇಲ್ಲಿ ತೆಗೆದುಕೊಳ್ಳಬೇಡಿ.

(ಅಡಚಣೆ)

ಶ್ರೀ ಆರಗ ಜ್ಞಾನೇಂದ್ರ : ಸರ್ ಮಿನಿಸ್ಟರ್‌ರವರಿಗೆ ಮಾತನಾಡಲಿಕ್ಕೆ ಬಿಡಿ. ನೀವು ಮಂತ್ರಿಯಾಗಿ ಸುಮಾರು ಬಿಲ್ಲುಗಳನ್ನು ತಂದಿದ್ದೀರಿ. ಹೀಗೆ ಮಾಡಿದರೆ ಹೇಗೆ?

ಡಾ ; ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೇ, ಮಾನ್ಯ ಸೋಮಣ್ಣನವರು, ಹಾಗೂ ಮಾನ್ಯ ಪ್ರತಿಪಕ್ಷದ ನಾಯಕರು ಎಣಿಸುವು ಹಾಗೆ ಇದರಲ್ಲಿ ಯಾವುದೇ ಅಂತಹ ವಿಷಯಗಳಿಲ್ಲ. Already ನಮ್ಮ ಸರ್ಕಾರ ಕಳೆದ ವರ್ಷ ಮುಂಬೈ, ಹೈದರಾಬಾದ್ ಮತ್ತು ಇತರ ನಗರಗಳಲ್ಲಿ ಜನ ಒಂದು ರಸ್ತೆಯ ಅಗಲೀಕರಣಕ್ಕೆ ಅಥವಾ ಏನಾದರೊಂದು ಪಾರ್ಕ್ ಇತ್ಯಾದಿ ಮಾಡುವ ಬಗೆ ಸಾರ್ವಜನಿಕರ ಭೂಮಿಯ ಒಂದು ಸಣ್ಣ ತುಂಡು, ಅವರು ಧರ್ಮಾರ್ಥವಾಗಿ, ಉಚಿತವಾಗಿ ಕೊಟ್ಟಲ್ಲಿ, ಅದಕ್ಕೆ ಪ್ರತಿಯಾಗಿ ನಮಗೆ ಏನೂ ಭಾರವಾಗದಿದ್ದ ಆ ಜಾಗವನ್ನು ಕೊಟ್ಟರೆ, ಆ ಜಾಗದ ಒಂದೂವರೆ ಪಟ್ಟು ಅವರದ್ದೇ ಜಾಗದಲ್ಲಿ ಉಳಿಕೆ ಜಾಗದಲ್ಲಿ ಅಭಿವೃದ್ಧಿ ಮಾಡುವಂಥಾದ್ದು, ಇದು ಬಹಳ ಕ್ಷುಲ್ಲಕವಾದಂಥ ವಿಷಯ. ನಾವು ಇದರಲ್ಲಿ ಸೇರಿಸಿದಂಥಾದು....

ಶ್ರೀ ಕೆ.ಆರ್. ರಮೇಶ್ ಕುಮಾರ್ : ಹೌಸ್‌ನಲ್ಲಿ ಯಾವುದೇ ಒಂದು ಸನ್ನಿವೇಶದಲ್ಲಿ Leader of the House, debate ಗೆ reply ಕೊಟ್ಟ ನಂತರ generally we do not transact any business. ನಾನು ತಮ್ಮಲ್ಲಿ ಏನು ವಿನಂತಿ ಮಾಡುತ್ತೇನೆಂದರೆ, he has replied; clarifications ಗೆ ಅಧ್ಯಕ್ಷರು ಅವಕಾಶ ಕೊಟ್ಟಿದ್ದಾರೆ. Clarificationsಗೆ reply ಕೊಟ್ಟ ಮೇಲೆ generally ತಾವು ಯಾರಿಗೂ wait ಮಾಡಬಾರದು. Adjourned ಅಂತ ಹೇಳಿ ತಾವು ಹೊರಟುಬಿಡಬೇಕು. ತಾವು ತಡ ಮಾಡಿಬಿಟ್ಟಿರಿ. We agree with that all that you have said; we can take it up in the next session. ಇಲ್ಲದಿದ್ದರೆ, ಅವರಿಗೆ ತಾವು ಅಗೌರವ ಮಾಡಿದಂತಾಗುತ್ತದೆ. Please adjourn.

Mr. Speaker : If the Government invite to get the Billpassed.....

ಶ್ರೀ ಎನ್. ಧರ್ಮಸಿಂಗ್ : ನಿಮಗೆಲ್ಲಾ ಬಿಲ್ ಪಾಸ್ ಮಾಡಿಕೊಡುತ್ತೇವೆ. ಇದಕ್ಕೆ ತಕರಾರೇನಿಲ್ಲ. ಸಮಗ್ರವಾಗಿ ಚರ್ಚೆಯಾಗಬೇಕು. ಸಭಾನಾಯಕರು ಉತ್ತರ ಕೊಟ್ಟ ಮೇಲೆ ಇದರ ಘನತೆ ಹೋಗುತ್ತದೆ Sanctity ಹೋಗುತ್ತೇ. ನಿತ್ಯ ಒಂದೊಂದು ಬಿಲ್ ತಂದು ನೀವೂ ಯಡಿಯೂರಪ್ಪನವರು ಪಾಸ್ ಮಾಡಿ ಕೊಡಿ ಅನ್ನುವುದೆಲ್ಲಾ ಏನು?

ಶ್ರೀ ಎಚ್.ಡಿ. ಕುಮಾರಸ್ವಾಮಿ (ಮುಖ್ಯಮಂತ್ರಿಗಳೂ) : ನಾನು ಉತ್ತರ ಕೊಡುವುದಕ್ಕೆ ಮುಂಚೆಯೇ ವಿರೋಧ ಪಕ್ಷದ ನಾಯಕರಿಗೆ ಮನವಿ ಮಾಡಿದ್ದೆ. ಬಿಲ್ ಪಾಸ್ ಮಾಡಿದ ಮೇಲೆ ಉತ್ತರ ಕೊಡುತ್ತೇನೆ ಅಂತ. ಅವರು ಮೊದಲು ನೀವು ಉತ್ತರ ಕೊಟ್ಟುಬಿಡಿ, ಆ ಮೇಲೆ ಬಿಲ್ ಪಾಸ್ ಮಾಡೋಣ ಅಂದರು. ಇದು ಖರ್ಗೆಯವರ ಅಧ್ಯಕ್ಷತೆಯಲ್ಲೇ ಮಾಡಿರುವುದು. ನಾವು ಇದು ಮಾಡಿರುವುದಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಉತ್ತರ ಕೊಡುವುದನ್ನೆ ಲೇಟ್ ಮಾಡಿ ಅವರ ಬಿಲ್ introduce ಮಾಡಿಕೊಳ್ಳಬಹುದಿತ್ತು. ಒಂದು ಸಲ ನೀವು ಉತ್ತರ ಕೊಡುವ ಪ್ರಕ್ರಿಯೆ ಪ್ರಾರಂಭವಾದ ಮೇಲೆ ಅದಕ್ಕೆ ಸ್ಪಷ್ಟೀಕರಣ ಕೇಳುವುದು, ನಂತರ ಅದಕ್ಕೆ ಸಮಾಧಾನ ಹೇಳಿದ ಮೇಲೆ generally ನಾವು business close ಮಾಡಬೇಕು. ಇಲ್ಲಿ ಸ್ಪಷ್ಟೀಕರಣ ಕೇಳಿದ ಮೇಲೂ bill introduce ಮಾಡುವುದು ಸರಿಯಲ್ಲ.

ಶ್ರೀ ಹೆಚ್.ಡಿ. ಬಸವರಾಜು : ಮಾನ್ಯ ಮುಖ್ಯಮಂತ್ರಿಗಳು ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದಾರೆ. ಈ ಬಿಲ್ಲನ್ನು ಪಾಸ್ ಮಾಡಿಕೊಡಬೇಕು ಅಂತ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ವಿ. ಸೋಮಣ್ಣ : ಮಾನ್ಯ ಸಚಿವರು explain ಮಾಡಲಿ.

ಡಾ ; ವಿ.ಎಸ್. ಆಚಾರ್ : ನೋಡಿ, ಅನಧೀಕೃತವಾಗಿರುವುದನ್ನು ಸಕ್ರಮ ಮಾಡುವಂಥದ್ದು next ಬರುತ್ತದೆ. ಅದಕ್ಕೆ ಮುಂಚೆ ಜಗತ್ತಿನಲ್ಲಿ ಯಾರಿಗೂ ತೊಂದರೆ ಯಾಗದಂತಹ ಒಂದು ಸಣ್ಣ most inroccuous ತಿದ್ದುಪಡಿ ತರುತ್ತಿದ್ದೇನೆ. ಅದರಲ್ಲಿ ಈ ಹಿಂದೆ ಇರುವ ರಸ್ತೆಗಳನ್ನು ಅಗಲ ಮಾಡಲಿಕ್ಕೆ ಪಾರ್ಕ್‌ಗಳನ್ನು ನಿರ್ಮಿಸುವ ಸಂದರ್ಭದಲ್ಲಿ ಅಥವ heritage buildings ಮಾಡುವಾಗ ಯಾರಾದರೂ 10 sq.ft ಜಾಗ ಬಿಟ್ಟು ಕೊಟ್ಟರೆ..

ಶ್ರೀ ವಿ. ಸೋಮಣ್ಣ : ದಯವಿಟ್ಟು ಈ ಬಿಲ್ ಬೇಡಿ. ಮುಖ್ಯಮಂತ್ರಿಗಳು ಅಧ್ಯಕ್ಷರ ಹತ್ತಿರ, ನಮ್ಮ ನಾಯಕರ ಹತ್ತಿರ ಮಾತನಾಡಿದ್ದು regularisation ದ್ದು.

ಶ್ರೀ ಹೆಚ್.ಡಿ. ಬಸವರಾಜು : ಆಗಲೇ ಇದು ಮಂಡನೆಯಾಗಿದೆ, ಅವರು ವಿವರಣೆ ಕೊಡುತ್ತಾರೆ, ಆಮೇಲೆ ಚರ್ಚೆ ಮಾಡಿ, ಆಮೇಲೆ ಬೇರೆ ಬಿಲ್ ತೆಗೆದುಕೊಳ್ಳಲಿಲ್ಲ.

ಡಾ: ವಿ.ಎಸ್. ಆಚಾರ್ : ಸರ್ ಆ ಮೂರು ವಿಷಯಗಳು ಒಟ್ಟಿಗೆ, ಸರ್ಕಾರ ಸೂಚಿಸು ವಂತಹ ಅಥವಾ ಇನ್ಯಾವುದಾದರೂ ಅಂತಹ ಲೋಕೋದ್ಧಾರದ ಕಾರ್ಯಕ್ಕೆ ಯಾರಾದರೂ ಜಾಗ ಬಿಟ್ಟು ಕೊಟ್ಟರೆ ಅವರು ಬಿಟ್ಟುಕೊಟ್ಟ ಜಾಗಕ್ಕೆ ಪ್ರತಿಯಾಗಿ ಆ ಜಾಗದ ಒಂದೂವರೆ ಪಾಲಿನಷ್ಟು ಅವರ ಜಾಗದಲ್ಲಿ ಅಭಿವೃದ್ಧಿ ಮಾಡಿಕೊಳ್ಳಲಿಕ್ಕೆ ಬೇಕಾದಂತಹ.... (ಅಡಚಣೆ) ಸರ್ಕಾರದ ಮನಸ್ಸಿನಲ್ಲೇನಿದೆ ಅಂದರೆ fly over ಮತ್ತು metro rail ಮತ್ತು slums development ಮಾಡುವಂತಹ ವಿಚಾರದಲ್ಲಿ notification ಮಾಡಬೇಕು ಎಂಬ ವಿಚಾರ, ಬಿಟ್ಟರೆ ಇದರಲ್ಲ ಬೇರೆನಿಲ್ಲ. ನಾನು ತಮ್ಮಲ್ಲಿ ವಿನಂತಿ ಮಾಡುತ್ತಿದ್ದೇನೆ: ದಯವಿಟ್ಟು ಇದನ್ನು ಪರ್ಯಾ ಲೋಚಿಸಬೇಕು.

ಶ್ರೀ ಎ. ಕೃಷ್ಣಪ್ಪ : ಇದು Karnataka town and country planning and certain other laws (amendment) bill 2004 ಇದರಲ್ಲಿ ಎರಡನೇ ಪುಟದಲ್ಲಿ, ಈಗ ನೀವು oral ಆಗಿ ಹೇಳುವಾಗ Metro rail ಬಂತು, ಅಲ್ಲಿ ನೋಡಿ, No such development, change in land use change in land use referred in sub section 1, ಆ ಬಿಲ್ಲಿನಲ್ಲಿ ನಿಮ್ಮ ವಿವರಣೆಯಲ್ಲಿ ಅದು ಬಂದಿಲ್ಲ. Metro, Mono, bus stands.....

ಡಾ: ವಿ.ಎಸ್. ಆಚಾರ್ : ಈ ವರ್ಷದಲ್ಲಿ ಯಾರಾದರೂ ಮೆಟ್ರೋ, fly over ಗೂ ಬಿಟ್ಟು ಕೊಡಲು ಬರಬಹುದು ಅಂತ ತೋರಿತು. ಅದಕ್ಕಾಗಿ 14 [ಬಿ] ಆದ ಮೇಲೆ, ಸರ್ಕಾರ ಉದ್ದೇಶಿಸಬಹುದಾದಂತಹ ಇತರ ಯಾವುದಾದರೂ ಕೆಲಸಕ್ಕೆ ಅಂತ ಇದೆ. ಆದರೆ ಹಿಂದೆ ಮೇಲ್ಮನೆಯಲ್ಲಿ ಇದನ್ನು ಒಪ್ಪುವಾಗ ಸಧ್ಯ ನಿಮ್ಮ ಮನಸಿನಲ್ಲೇನುಂಟು ಅಂದಾಗ ನಾನು ನಾಲ್ಕನೆಯ ವಿಷಯವೊಂದನ್ನು ಸೇರಿಸಲು ಯೋಚಿಸಿದೆ. Urban infrastructure projects such as construction of bridge, fly over, airport, inland water ways, mass rapid transit system including rail system or any other public facilities and public utility including slum rehabilitation or slum improvements as notified and prescribed by the State Government from time to time. This is the notification we proposed. ಇದಕ್ಕೊಂದು enabling clause add ಮಾಡುವುದು.

ಯಾರಿಗೂ ಯಾವುದೇ ರೀತಿ ತೊಂದರೆಯಿಲ್ಲ. ಅಧ್ಯಕ್ಷರೇ, ಇದನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಿಮ್ಮ intention ಇಷ್ಟೇ. For a proposed project, ನೀವು ಯಾವ landನ್ನು ಇಷ್ಟಪಟ್ಟಿದ್ದೀರಿ ಅದನ್ನು ಸ್ವಾಧೀನಪಡಿಸಿಕೊಳ್ಳಲಿಕ್ಕೇ ಬೇಕು. ಹಾಗೆ ಉದ್ದೇಶಿತ ಜಾಗವನ್ನು ನೀವು ಬಳಸಲು ನಿಮಗೆ ಎರಡು ,ಮಾರ್ಗ. ಒಂದು ಅವರು ಸ್ವತಃ ಬಿಟ್ಟುಕೊಡುವುದು, ಎರಡನೆಯದು market value compensation ಕೊಟ್ಟು ವಶಪಡಿಸಿ ಕೊಳ್ಳುವುದು. ಆ option ಇಟ್ಟಿರುವುದರಿಂದ ನಮಗೆ ಯಾವುದೂ ತೊಂದರೆ ಇಲ್ಲ. ಅಷ್ಟೇ ಅಲ್ಲವೇ ಇದರಲ್ಲಿ? ಹಾಗಾದರೆ ಮುಗಿಸಿ.

ಶ್ರೀ ಎ. ತನ್ವೀರ್ ಸೇಠ್ : ಅಧ್ಯಕ್ಷರೇ, ಇವತ್ತೇನು ಈ ಬಿಲ್ ತಂದಿದ್ದಾರೆ ಇದು ಕೇವಲ ಬೆಂಗಳೂರು ನಗರಕ್ಕೆ ಮಾತ್ರ ಸೀಮಿತವಲ್ಲ. ಇಡೀ ರಾಜ್ಯಕ್ಕೆ ಇದು ಬರುವಂಥದ್ದು. ಯಾವುದೇ ಒಂದು ಅಭಿವೃದ್ಧಿ ಕೆಲಸ ಸರ್ಕಾರದಿಂದ ಮಾಡುವ ಉದ್ದೇಶವಿದ್ದಲ್ಲಿ, ಯಾವ ಭಾಗದಲ್ಲಿ ಅಭಿವೃದ್ಧಿ ಆಗುತ್ತೆ ಅಲ್ಲಿ ಮಾಲೀಕರು ಬಿಟ್ಟುಕೊಟ್ಟಲ್ಲಿ ಅವರಿಗೆ transfer rights ಕೊಡುವ ವಿಚಾರದಲ್ಲಿ ಈ ಬಿಲ್ ತಂದಿದ್ದಾರೆ. ಇಲ್ಲಿ ಒಂದು ಪ್ರಶ್ನೆ ಉದ್ಭವವಾಗುವುದೇನೆಂದರೆ ಇವತ್ತು ಭೂಬದಲಾವಣೆ ಮಾಡುವಂತಹ ಸಂದರ್ಭದಲ್ಲಿ ಒಂದು ವಾಣಿಜ್ಯ ಕಟ್ಟಡವನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದಲ್ಲಿ ಆ commercial rights ಬೇರೆ ಕಡೆ ನಿರ್ಮಾಣ ಮಾಡಬೇಕಾಗಿದ್ದಲ್ಲಿ ಭೂ ಬದಲಾವಣೆ ಮಾಡಿಯೇ ಮಾಡಬೇಕಾಗುತ್ತದೆ. ಈ process of change of land use ಏನು ಬರುತ್ತದೆ, ಅದರಲ್ಲೇ ನಾದರೂ ಅನುಕೂಲ ಮಾಡಿಕೊಡುವ ಉದ್ದೇಶ ನಿಮಗಿದೆಯಾ? ಏಕೆಂದರೆ ರಾಜ್ಯ ಸರ್ಕಾರ ಯಾವುದೇ ಅಭಿವೃದ್ಧಿ ಕೆಲಸ ಮಾಡಬೇಕಾಗಿದ್ದರೆ.....

ಮುಖ್ಯವಾಗಿ ಜನ ವಹಿವಾಟು ಇರುವ ಜಾಗದಲ್ಲೇ ಅಭಿವೃದ್ಧಿ ಮಾಡುವುದಕ್ಕೆ ಹೋದಾಗ ಅದೆಲ್ಲವೂ commercial activitiesಗೆ ಮೀಸಲಿಟ್ಟಿರುವ ಜಾಗದಲ್ಲಿ ಭೂ ಬದಲಾವಣೆ ಪ್ರಕ್ರಿಯೆಯನ್ನು ಮಾಡುವುದಕ್ಕೆ ಮುಂದಾಗುತ್ತಾರೆ. ಅದು ಒಂದು ಪಟ್ಟಿನಷ್ಟು ಇವರು ಬೇರೆ ಕಟ್ಟಿಕೊಳ್ಳುವ ನಿರ್ಮಾಣ ಮಾಡಿಕೊಳ್ಳುವ ಅಧಿಕಾರ ಇರುವಂತಹ ಜಾಗವನ್ನು ಒಂದೂವರೆ ಪಟ್ಟಿನಷ್ಟು ಇವರು ಬೇರೆ ಕಟ್ಟಿಕೊಳ್ಳುವ ನಿರ್ಮಾಣ ಮಾಡಿಕೊಳ್ಳುವ ಅಧಿಕಾರ, transfer rights ಎಂದು ಏನು ಅವರಿಗೆ ಕೊಡುತ್ತಿದ್ದಾರೆ, ಇದರಲ್ಲಿ ಏನಾಗುತ್ತದೆಂದರೆ, ಸರ್ಕಾರ ಅಭಿವೃದ್ಧಿ ಕೆಲಸ ಮಾಡುವುದಕ್ಕೆ ಒಂದು ಕಡೆ ಬಹಳ ಅನುಕೂಲವಾಗುತ್ತದೆ. ಏಕೆಂದರೆ, ಮಾನ್ಯ ಹಿರಿಯ ಸದಸ್ಯರಾದ ಶ್ರೀ ರಮೇಶ್

ಕುಮಾರ್‌ರವರು ಹೇಳಿದಂತೆ ಯಾವುದೇ ಒಂದು ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕೆಂದರೆ, ಎರಡು ಮಾರ್ಗಗಳಿವೆ. ಒಂದು ಭೂ ಸ್ವಾಧೀನಪಡಿಸಿಕೊಳ್ಳುವುದು ಅಥವಾ ಮಾಲೀಕರೇ ಸ್ವತಃ ಕೊಟ್ಟಲ್ಲಿ, ಅವರಿಗೆ ರಾಜ್ಯ ಸರ್ಕಾರದಿಂದ ಒಂದು ಪಟ್ಟಿನಷ್ಟು ಇರುವುದನ್ನು ಒಂದೂವರೆ ಪಟ್ಟಿನಷ್ಟು ನೀಡುವ ಮೂಲಕ ಅವರು ಬೇರೆ ಬೇರೆ ಕಡೆಗಳಲ್ಲಿ ಕಟ್ಟಡ ಕಟ್ಟಿಕೊಳ್ಳುವಂತಹ ಅಧಿಕಾರ ಏನು ಕೊಡುತ್ತಿದ್ದೀರಿ, ಇದರಲ್ಲಿ ಏನಾಗುತ್ತದೆಂದರೆ, ವಾಣಿಜ್ಯ ಚಟುವಟಿಕೆಗಳು ಇರುವಂತಹ rights ಏನು ಇರುತ್ತದೆ, ಅವರಿಗೆ ಬೇರೆ ಕಡೆ ಭೂ ಬದಲಾವಣೆಗೆ ತೊಂದರೆಯಾಗದಿರುವ ರೀತಿಯಲ್ಲಿ ಬಳಸಿಕೊಳ್ಳುವಂತಹ ಅಧಿಕಾರವನ್ನು ಕೊಟ್ಟಲ್ಲಿ ಮಾತ್ರ ಇದರಲ್ಲಿ ಬಹುಶಃ ಇವೊತ್ತು ಬೆಂಗಳೂರು ನಗರಕ್ಕೆ ಸೀಮಿತವಾಗಿ ಮಾತನಾಡಿದಂತೆ, ಅಲ್ಲಿ ಇವೊತ್ತು ಒಂದು square foot ಜಾಗ ಮತ್ತು ಅದರ ಬೆಲೆ ಏನಿದೆ, ಇದನ್ನು ಗಮನದಲ್ಲಿಟ್ಟುಕೊಂಡು ಬಹುಶಃ ಅಲ್ಲಿ ಯಾರು ಕೂಡ ಮುಫತ್ತಾಗಿ ಬಿಟ್ಟುಕೊಡುವುದಕ್ಕೆ ಮುಂದಾಗುವುದಿಲ್ಲವೆಂಬುದು ನನ್ನ ಭಾವನೆ.

Sri K.R. RAMESH KUMAR : Not altering the staus or the character of the land ಅದೊಂದನ್ನು ಸೇರಿಸಿಕೊಂಡರೆ ಆಯಿತು.

ಶ್ರೀ ವಿ. ಸೋಮಣ್ಣ : ಇದು ಬೇಡವೆಂದು ನಾವು ತಮಗೆ ಏಕೆ ಹೇಳಿದೆವು ಎಂದರೆ, TDR system ಏನಿದೆ, ಈ ಸಿಸ್ಟಮ್ ಆಂಧ್ರಪ್ರದೇಶದಲ್ಲಿದ್ದು, ಅಲ್ಲಿಗೆ ನಾನು ಈಗಾಗಲೇ ಹೋಗಿ ಬಂದಿದ್ದೇನೆ. ಅದನ್ನು ಏತಕ್ಕೋಸ್ಕರ, ಉಪಯೋಗಿಸಿಕೊಳ್ಳಬೇಕೆಂಬ ನಮ್ಮ ಉದ್ದೇಶವೇನಿದೆಯೋ ಆ ಉದ್ದೇಶ ತಕ್ಷಣವೇ ಕಾರ್ಯ ರೂಪಕ್ಕೆ ಬರುವುದಿಲ್ಲ ಅದಕ್ಕೋಸ್ಕರ ನಾನು ನಿಮ್ಮಲ್ಲಿ ಏನು ವಿನಂತಿಸಿಕೊಳ್ಳುತ್ತೇನೆಂದರೆ, ಬೆಂಗಳೂರು ನಗರದಲ್ಲಿ ಸರ್ಕಾರಿ ಜಮೀನು ತೆಗೆದುಕೊಂಡು ಬೇರೆ ಬೇರೆ ಉದ್ದೇಶಗಳಿಗೆ ಏನೇನು ಅಭಿವೃದ್ಧಿಪಡಿಸಬೇಕಾಗಿದೆಯೋ, ರಸ್ತೆಗಳ ಅಗಲೀಕರಣ ಇರಬಹುದು, under-pass ಮಾಡು ವಂತಾದ್ದು ಆಗಿರಬಹುದು, fly-over ಮಾಡುವಂತಾದ್ದು ಆಗಿರಬಹುದು, ಬೇರೆ ಬೇರೆ ಉಪಯೋಗಗಳಿಗೋಸ್ಕರ ನಾವು ಏನು ಮಾಡಿಕೊಳ್ಳಬೇಕೆಂದಿದ್ದೇವೆ ಎಂದರೆ ಆಂಧ್ರಪ್ರದೇಶದಲ್ಲಿ ಮಾನ್ಯ ಚಂದ್ರಬಾಬು ನಾಯ್ಡುರವರು ಇದನ್ನು ಮಾಡಿ ಅವರು ಸಫಲತೆ ಕಾಣುವುದಕ್ಕಾಗಲಿಲ್ಲ, ಇವೊತ್ತು ತಮ್ಮ ಉದ್ದೇಶವೇನಿದೆ, ಈ ಉದ್ದೇಶ ಸಫಲತೆ ಕಾಣಬೇಕಾದರೆ, market price ಏನಿರುತ್ತದೆ, ಆ market rate ಅನ್ನು ಅವರು ಒಪ್ಪಿದರೆ ಕೊಡಬೇಕೆಂದಿದೆ. ಒಪ್ಪದಿದ್ದರೆ, ಅವರು ಜಮೀನನ್ನು ಕೊಡುವಂತಹ

ಪರಿಸ್ಥಿತಿಯಲ್ಲಿಲ್ಲಿರುವುದಿಲ್ಲ ಬಹುತೇಕ ಕಮರ್ಷಿಯಲ್ ಆಗಿರುವ ಪ್ರದೇಶಗಳಲ್ಲಿ ರಸ್ತೆಗಳಿಗೋಸ್ಕರ ಕಟ್ಟಡಗಳನ್ನು ಒಡೆದು ಹಾಕಬೇಕೆಂದೇನಿದೆ, ನನ್ನ ಅನಿಸಿಕೆಯಲ್ಲಿ ಬೆಂಗಳೂರು ನಗರದಲ್ಲಿ ಓಬೀರಾಯನ ಕಾಲದ ಸಣ್ಣ ಸಣ್ಣ ರಸ್ತೆಗಳೇನಿವೆ, ಇವೊತ್ತು ಅವೆಲ್ಲವೂ ಕಮರ್ಷಿಯಲ್ ಆಗಿ ಹೋಗಿವೆ. ಅವುಗಳನ್ನು ಅಲ್ಲಿನ ಕಟ್ಟಡಗಳನ್ನು ಒಡೆದು ಹಾಕುವಾಗ ನಾನು ತಮ್ಮಲ್ಲಿ ಏನು ವಿನಂತಿಸಿಕೊಳ್ಳುವುದೇನೆಂದರೆ, ಇದನ್ನು ಬದಲಾವಣೆ ಮಾಡಿಕೊಂಡು TDR ನಲ್ಲಿ ಆಗದೇ ಹೋದರೆ, ಮಾರ್ಕೆಟ್ ರೇಟ್‌ನಲ್ಲಿ ಅದನ್ನು purchase ಮಾಡುವುದಕ್ಕೂ ಕೂಡ ತಾವು ಅನುವು ಮಾಡಿಕೊಡಬೇಕು.

ಡಾ : ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, ಮೂವರು ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಮಾನ್ಯ ರಮೇಶ್ ಕುಮಾರ್, ತನ್ವೀರ್ ಸೇಠ್‌ರವರು ಇದನ್ನು ಸರಿಯಾಗಿ ಗ್ರಹಿಸಿದ್ದಾರೆ, ಅವರಿಗೆ ಸ್ವಲ್ಪ confusion ಇದೆ ಆ ಕಾರಣವಿಲ್ಲ. ಅವರು ಬಿಟ್ಟುಕೊಟ್ಟರೆ, ನಾವು ಅವರಿಗೆ ಕೊಡುವಂತಹ ರಿಯಾಯಿತಿ.

ಶ್ರೀ ವಿ. ಸೋಮಣ್ಣ : ಆ ಟೈಮ್‌ನಲ್ಲಿ ಮಾಡುವುದಕ್ಕಾಗುವುದಿಲ್ಲ ಮತ್ತು ಯೋಜನೆ ರೂಪಿಸುವುದಕ್ಕಾಗುವುದಿಲ್ಲ ಎಂಬುದು ನನ್ನ ಭಾವನೆ.

ಡಾ : ವಿ.ಎಸ್. ಆಚಾರ್ಯ : ಅವರು ಬಿಟ್ಟುಕೊಡದಿದ್ದರೆ, ಮಾರ್ಕೆಟ್ ರೇಟ್...

ಶ್ರೀ ವಿ. ಸೋಮಣ್ಣ : ಅದನ್ನು ಮಾಡಿ. ನಿಮ್ಮದು ಮಾರ್ಕೆಟ್ ರೇಟ್ ಅಂತ ಇಲ್ಲ, ಸರ್ಕಾರಿ ರೇಟ್ ಎಂದು ಇದೆ.

ಡಾ : ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, ಯಾರಾದರೂ ಜಾಗ ಬಿಟ್ಟು ಕೊಡದಿದ್ದರೆ....

ಶ್ರೀ ಕೆ.ಆರ್. ರಮೇಶ್ ಕುಮಾರ್ : ಆಚಾರ್ಯರವರೆ, ಹೊತ್ತು ಬಹಳ ಆಗಿದೆ. ನಾವು ತಮಗೆ ಎಲ್ಲರ ಕಡೆಯಿಂದಲೂ ಆಶ್ವಾಸನೆ ಕೊಡುತ್ತಿದ್ದೇವೆ. ಇದು mandatory ಏನಲ್ಲ, option ಇದೆ. Voluntary ಯಾಗಿ ಬಿಟ್ಟುಕೊಟ್ಟರೆ, ಮಾನ್ಯ ಸದಸ್ಯರಾದ ತನ್ವಿರ್ ಸೇಠ್‌ರವರು ಹೇಳಿರುವ ಹಿನ್ನಲೆಯಲ್ಲಿ ಒಂದು suggestion ತಮಗೆ ಹೇಳುವುದೇನೆಂದರೆ, not allowing the alteration of the character of the status of the land. ಈಗ commercial use ಗೆ ಇರುವಂತಾದ್ದನ್ನು ನಾಳೆ ಅವರಿಗೆ non-commercial ಜಾಗದಲ್ಲಿ ಒಂದೂವರೆ ಪಟ್ಟಿನಷ್ಟು ಕೊಟ್ಟಿದ್ದೇವೆಂದರೆ, change of land use ಮಾಡಬೇಕಾಗಿದ್ದರೆ, it is very costly in Vindhana Soudha.

ಡಾ : ವಿ.ಎಸ್. ಆಚಾರ್ಯ : ಆ ಪ್ರಾವಿಜನ್ ಇದೆ. ಮತ್ತು ಅಲ್ಲಿಯೇ ಉಳಿಯುವ ಜಾಗದಲ್ಲಿ.....

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಾನು ಹೇಳಿದ್ದನ್ನು ತಾವು ಗಮನಿಸಿಕೊಳ್ಳಲಿಲ್ಲ.

ಡಾ : ವಿ.ಎಸ್. ಆಚಾರ್ಯ : ಕೇಳಿಸಿಕೊಂಡೆ.

Sri K.R. RAMESH KUMAR : Change of land use is very costly in Vidhana Soudha ಎಂದು ಹೇಳಿದೆ.

ಡಾ : ವಿ.ಎಸ್. ಆಚಾರ್ಯ : ಅಲ್ಲಲ್ಲ. ಈಗ ಅಲ್ಲಿಯೇ ಇರುವ ಉಳಿಕೆ ಜಾಗದಲ್ಲೂ ಕೊಡುತ್ತೇವೆ. ಇಲ್ಲವೇ ತನ್ವಿರ್ ಸೇಠ್ ರವರೆ, ಆ Planning Authority Areaದಲ್ಲಿ ಬೇರೆ ಎಲ್ಲಿಯಾದರೂ ಅವರಿಗೆ ಸೇರಿದ ಜಾಗದಲ್ಲಿ ಮತ್ತು ಅವರ ಮಿತ್ರರಿಗೆ ಸೇರಿದ ಜಾಗದಲ್ಲೂ transfer of right ಇದೆ.

ಶ್ರೀ ತನ್ವಿರ್ ಸೇಠ್ : ಮಾರಾಟ ಮಾಡುವಂತಹ ಅಧಿಕಾರವೂ ಇದೆ.

ಡಾ : ವಿ.ಎಸ್. ಆಚಾರ್ಯ : ಇದೆ, ಎಲ್ಲವೂ ಇದೆ. ಆ ಮೂಲ ಕಾಯಿದೆಗೆ ನಾವು ಇವೊತ್ತು ಹೋಗಲಿಲ್ಲ. ಇವೊತ್ತು ಹೋಗಿರುವುದು ಒಂದು addition ಅಷ್ಟೇ. ಮಾನ್ಯ ಅಧ್ಯಕ್ಷರೆ, ಇದನ್ನು ಸಭೆಯು ದಯವಿಟ್ಟು ಅಂಗೀಕರಿಸಬೇಕೆಂದು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು : ಪ್ರಶ್ನೆ ಏನೆಂದರೆ: "ಖಂಡ 2 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ "

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಡಾ : ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, " ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ " ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2005ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೀಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

2. ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ, 2004

ಡಾ : ವಿ.ಎಸ್. ಆಚಾರ್ಯ : (ವೈದ್ಯಕೀಯ ಶಿಕ್ಷಣ ಸಚಿವರು)(ಮುಖ್ಯಮಂತ್ರಿಗಳ ಪರವಾಗಿ) : ಮಾನ್ಯ ಅಧ್ಯಕ್ಷರೆ, " ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ಘನತೆವೆತ್ತ ರಾಜ್ಯಪಾಲರ ಸಂದೇಶದೊಡನೆ ಪುನರ್ ಪರಿಗಣನೆಗಾಗಿ ಹಿಂತಿರುಗಿಸಲಾದಂತೆ ಮತ್ತು ವಿಧಾನ ಪರಿಷತ್ತಿನಿಂದ ಎರಡನೇ ಬಾರಿಗೆ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿರುವ 2004ರ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಹಾಗೂ ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."